O.S. 279/2013
P.W.3

**ಸಾಕ್ಷಿಯನ್ನು ದಿನಾಂಕಃ 30-01-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು 3 ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆಯನ್ನು ಯಾರು ಯಾರ ವಿರುದ್ಧ ಯಾವ ಪರಿಹಾರಕ್ಕೆ ಸಲ್ಲಿಸಿರುವರು ಎಂದು ನನಗೆ ಗೊತ್ತಿಲ್ಲ. ನನ್ನ ಅಪ್ಪ ಮನೆಯಲ್ಲಿ ವಿಲ್ ನಾಮೆ ಸಹಿ ಹಾಕಿದ್ದೇನೆ ಎಂದು ಮಾತನಾಡುತ್ತಿದ್ದರು. ಯಾವ ಸರ್ವೆ ನಂಬರಿಗೆ ಸಂಬಂಧ ಪಟ್ಟ ವಿಲ್ ಎಂದು ನನಗೆ ಗೊತ್ತಿಲ್ಲ. ವಿಲ್ಲಿನ ದಸ್ತಾವೇಜು ಸಂಖ್ಯೆ ನನಗೆ ಗೊತ್ತಿಲ್ಲ. ಆ ವಿಲ್ಲನ್ನು ಯಾರು ಯಾರಿಗೆ ಯಾವ ದಿನಾಂಕದಂದು ಬರೆದುಕೊಟ್ಟಿರುವರು ಎಂದು ನನಗೆ ಗೊತ್ತಿಲ್ಲ. ವಿಲ್ಲಿನ ದಿನಾಂಕ, ತಿಂಗಳು ಮತ್ತು ವರ್ಷವನ್ನು ನನ್ನ ತಂದೆ ನನಗೆ ಹೇಳಿರುವುದಿಲ್ಲ ಮತ್ತು ಅದನ್ನು ಯಾರು ಯಾರಿಗೆ ಬರೆದುಕೊಟ್ಟರು ಎಂದು ನನಗೆ ತಿಳಿಸಿರುವುದಿಲ್ಲ. ನಾನು ನನ್ನ ತಂದೆಯೊಂದಿಗೆ ಬ್ಯಾಂಕಿಗೆ ಹೋಗುತ್ತಿದ್ದ ಕಾರಣ ನನಗೆ ಅವರ ಸಹಿಯ ಪರಿಚಯ ಇರುತ್ತದೆ. ನನ್ನ ತಂದೆಯ ಸಹಿ ಇರುವ ಬೇರೆ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ. ನನ್ನ ತಂದೆ ಯಾವುದೇ ವಿಲ್ಲಿಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಿಲ್ಲಿನಲ್ಲಿ ಕಂಡುಬರುವ ಸಹಿ ನನ್ನ ತಂದೆಯದ್ದು ಅಲ್ಲ ಎಂದರೆ ಸರಿಯಲ್ಲ. ವಕೀಲರಾದ ಮರುಳಸಿದ್ದಪ್ಪರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಅವರು ಪಕ್ಕದ ಊರಿನವರು. ಅವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಲ್ ಕಾನೂನು ಬಾಹಿರವಾಗಿತ್ತು ಸೃಷ್ಠಿಸಿಕೊಂಡದ್ದು ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಕುರಿತು ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ಮತ್ತು 2 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುವರು.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

30-01-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**